# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 498/2025

**ಚಾಸಾ–2 ಪ್ರಾಸಾ–7**

| | | |
|---|---|---|
| ಹೆಸರು | – | ಮಾಯಪ್ಪ ಗೋಕಾವಿ |
| ತಂದೆಯ ಹೆಸರು | – | ಮಾದಪ್ಪ |
| ವಯಸ್ಸು | – | 31 ವರ್ಷ |
| ವೃತ್ತಿ | – | ಪೊಲೀಸ್ ಪೇದೆ. |
| ವಾಸಸ್ಥಳ | – | ಹೊಸನಗರ. |

(ದಿನಾಂಕಃ **04.06.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು 8 ನೇ ತಿಂಗಳು 2023 ರಿಂದ ಇಲ್ಲಿಯವರೆಗೆ ಹೊಸನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 29.11.2024 ರಂದು ನಾವು ರಾತ್ರಿ ಠಾಣೆಯಲ್ಲಿ ಇದ್ದಾಗ ಚಾಸ 1 ರವರು ನನ್ನನ್ನು ಕರೆದುಕೊಂಡು ಹೊಸನಗರ ಠಾಣಾ ವ್ಯಾಪ್ತಿಯಲ್ಲಿ ಶಿವಮೊಗ್ಗ ರಸ್ತೆ ಮಾವಿನಕೊಪ್ಪ, ಮಂಡಾನಿ, ಕರಿನಗೊಳ್ಳಿ ಗ್ರಾಮಗಳಲ್ಲಿ ಗಸ್ತು ನಿರ್ವಹಿಸುತ್ತಿರುವಾಗ, ರಾತ್ರಿ 8 ಗಂಟೆ ಸಮಯದಲ್ಲಿ ಕರಿನಗೊಳ್ಳಿ ಹತ್ತಿರದಲ್ಲಿ ಇದ್ದಾಗ ಮುಂಬಾರು ಕಡೆಯಿಂದ ಒಂದು ಲಾರಿ ನಂಬರ್ ಕೆ.ಎ 29 9831 ನಮ್ಮ ಎದುರುಗಡೆ ಬಂದಿರುತ್ತದೆ.

3. ಸದರಿ ವಾಹನ ಮರಳು ತುಂಬಿರಬಹುದು ಎಂದು ಅನುಮಾನ ಉಂಟಾಗಿ ನಮ್ಮ ಸರ್ಕಾರಿ ಇಲಾಖಾ ವಾಹನವನ್ನು ತಿರುಗಿಸಿ ಸದರಿ ಲಾರಿಯನ್ನು ಹಿಂಬಾಲಿಸಿದಾಗ ಸದರಿ ಲಾರಿಯು ಎಂ.ಗುಡ್ಡೆಕೊಪ್ಪ ಗ್ರಾಮ ಪಂಚಾಯ್ತಿ ಹತ್ತಿರ ಲಾರಿಯ ಚಾಲಕ ನಮ್ಮ ವಾಹನವನ್ನು ನೋಡಿ ಲಾರಿಯನ್ನು ರಸ್ತೆಯ ಬದಿಗೆ ನಿಲ್ಲಿಸಿ ಓಡಿ ಹೋಗಿರುತ್ತಾರೆ.

4. ನಾವು ಸದರಿ ಲಾರಿಯ ಹತ್ತಿರ ಬಂದು ನೋಡಿದಾಗ ಸದರಿ ಲಾರಿಯು ಕೆ.ಎ 29 9831 ಟಿಪ್ಪರ್ ಲಾರಿ ಆಗಿರುತ್ತದೆ. ಸದರಿ ಲಾರಿಯಲ್ಲಿ ಮರಳು ತುಂಬಿರುತ್ತದೆ. ಸದರಿ ಲಾರಿಯಲ್ಲಿರುವ ಮರಳನ್ನು ಗುಮನಿಸಿದಾಗ ಪರವಾನಿಗೆ ಇಲ್ಲದೇ ಯಾವುದೊ ನದಿಯಲ್ಲಿ ಮರಳು ತುಂಬಿಕೊಂಡು ಬಂದಿರುತ್ತದೆ. ಸದರಿ ಲಾರಿಯಲ್ಲಿ ಇದ್ದ ಮರಳಿನ ಅಂದಾಜು ಮೊತ್ತ 25 ಸಾರಿ ಮತ್ತು ಲಾರಿಯ ಬೆಲೆ 6 ಲಕ್ಷ ಇರಬಹುದು.

5. ಸದರಿ ಲಾರಿಯ ಚಾಲಕ ಮತ್ತು ಮಾಲಿಕರನ ವಿರುದ್ಧ ಚಾಸ 1 ರವರು ಪ್ರಕರಣವನ್ನು ದಾಖಲಿಸುವ ಉದ್ದೇಶದಿಂದ ಸದರಿ ಲಾರಿಯನ್ನು ನಮ್ಮ ಕಚೇರಿಗೆ ತೆಗೆದುಕೊಂಡು ಬಂದಿರುತ್ತಾರೆ. ನಾನು ಸದರಿ ವಿಚಾರವಾಗಿ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

6. ಆ ದಿನ ಓಡಿ ಹೋದ ಲಾರಿಯ ಚಾಲಕನನ್ನು (ಆರೋಪಿ 1) ರವರನ್ನು ಸಾಕ್ಷಿಯು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ 4 ಬಾವ ಚಿತ್ರಗಳನ್ನು ತೋರಿಸಿದ್ದು ಸದರಿ ಪೊಟೋದಲ್ಲಿ ಇದ್ದ ವಾಹನವನ್ನು ಘಟನಾ ಸ್ಥಳದಲ್ಲಿ ತಾನು ನೋಡಿದ ವಾಹನ ಆಗಿರುತ್ತದೆ ಎಂದು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ನಿಪಿ13 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವೈ.ಪಿ.ಎಂ ರವರಿಂದಃ**

1. ನಾನು, ಚಾಸ 1 ಮತ್ತು ಸರ್ಕಾರಿ ವಾಹನದ ಚಾಲಕರಾದ ಜಗಧೀಶ್ ರವರು ಕೂಡಿಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಮ್ಮನ್ನು ನೋಡಿ ಲಾರಿಯ ಚಾಲಕ ಶಿವಮೊಗ್ಗದಿಂದ ಬರುವ ರಸ್ತೆಯ ಎಡಭಾಗದಲ್ಲಿ ವಾಹನವನ್ನು ನಿಲ್ಲಿಸಿ ಓಡಿ ಹೋಗಿರುತ್ತಾರೆ.

2. ಶಿವಮೊಗ್ಗ ರಸ್ತೆಯ ಎಡಭಾಗದಲ್ಲಿ ಮನೆಗಳು ಇರುತ್ತವೆ ಎಂದು ಸೂಚಿಸಿದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಬೀದಿ ದೀಪದ ವ್ಯವಸ್ಥೆ ಇರುವುದಿಲ್ಲ ಎಂದರೆ ಸರಿ.

3. ಓಡಿ ಹೋದ ವ್ಯಕ್ತಿಯ ಮುಖ ಚಹರೆಯನ್ನು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಆತನನ್ನು ಹಿಡಿಯಲು ಪ್ರಯತ್ನಿಸಿರುವುದಿಲ್ಲ. ನಾವು ಸ್ಥಳದಲ್ಲಿ ಸುಮಾರು 10 ನಿಮಿಷ ಇದ್ದೆವು.

4. ಚಾಸ 1 ರವರು ಸ್ಥಳದಲ್ಲಿ ಲಾರಿಯನ್ನು ಹಿಡಿದ ಬಗ್ಗೆ ಸ್ವ ದೂರನ್ನು ಕೊಟ್ಟು ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಾನು ತನಿಖಾಧಿಕಾರಿಗಳ ಮುಂದೆ ಘಟನೆ ಆದ ಮರುದಿನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

5. ನಾನು ಆ ದಿನ ಚಾಸ 1 ರವರ ಜೊತೆ ಗಸ್ತು ಕರ್ತವ್ಯಕ್ಕೆ ಹೋಗಿರುವುದಿಲ್ಲ ಮತ್ತು ಆರೋಪಿ 1 ರವರು ಅಕ್ರಮವಾಗಿ ಲಾರಿಯನ್ನು ಮರಳನ್ನು ಸಾಗಾಣಿಕೆ ಮಾಡುತ್ತಿರಲಿಲ್ಲ ನಾನು ಚಾಸ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿಪಿ13 ಎಂದು ಗುರುತಿಸ್ಪಟ್ಟ ಪೋಟೋಗಳು ಲಾರಿ ನಿಲ್ಲಿಸಿದ ಪೋಟೋಗಳು ಆಗಿರುವುದಿಲ್ಲ ಎಂದು ಸೂಚಿಸಿದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.